# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:22–11–2023 ರಂದು ಬುಧವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ **ಕುವೆಂಪು ಶತಮಾನೋತ್ಸವ ಭವನದ ಹೊಸ "ಸಿಂಡಿಕೇಟ್ ಸಭಾಂಗಣ"ದಲ್ಲಿ** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ವೆಂಕಟೇಶ್ ಎಸ್. ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ. ಐ.ಎ.ಎಸ್. ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 3. | ಪ್ರೊ. ಗೋಪಿನಾಥ್ ಎಸ್.ಎಂ. ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ. ಜಂಟಿ ನಿರ್ದೇಶಕರು | ಸದಸ್ಯರು |
| 5. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು | ಸದಸ್ಯರು |
| 6. | ಡಾ. ಲಕ್ಷ್ಮೀಶ ಎ.ಎಸ್. ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ತ್ರಿಪುರ ಮಹೇಶ್ವರ ಎಂ., ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಉಮೇಶ್ ಕೆ., ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಸಣ್ಣಹನುಮಪ್ಪ ಜಿ., ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಅನಂತ ಎಸ್. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಶೇಖರ, ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಪರಮೇಶ ಮಸಾಲ್‌ವಾಡ., ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಮುಷ್ತಾಕ್ ಅಹಮದ್., ಪ್ರಾಂಶುಪಾಲರು | ಸದಸ್ಯರು |
| 14. | ಶ್ರೀ ವಿನ್‌ಸೆಂಟ್ ಕಾರ್ಡೋಜ., ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀ ಚಂದ್ರಶೇಖರ ಎಸ್. | ಸದಸ್ಯರು |
| 16. | ಶ್ರೀ ಎಂ.ಎ. ರಮೇಶ್ ಹೆಗಡೆ | ಸದಸ್ಯರು |
| 17. | ಶ್ರೀಮತಿ ಗೀತಾಂಜಲಿ | ಸದಸ್ಯರು |
| 18. | ಶ್ರೀಮತಿ ಮಮತಾ ಸಾಲಿ., ಪ್ರಾಂಶುಪಾಲರು | ಸದಸ್ಯರು |
| 19. | ಶ್ರೀ ಕುಮಾರೇಗೌಡ | ಸದಸ್ಯರು |
| 20. | ಶ್ರೀ ಮನೋಜ್ ಸಲ್ಡಾನಾ | ಸದಸ್ಯರು |
| 21. | ಡಾ. ರವಿಕಿರಣ ಹೆಚ್.ಕೆ. | ಸದಸ್ಯರು |
| 22. | ಶ್ರೀ ಶಿವಣ್ಣ ಪಿ. | ಸದಸ್ಯರು |
| 23. | ಡಾ. ನಾಗ್ಯಾನಾಯ್ಕ ಬಿ.ಹೆಚ್. ಪ್ರಾಧ್ಯಾಪಕರು | ಸದಸ್ಯರು |
| 24. | ಡಾ. ನಾಗರಾಜ ಪ್ರಾಧ್ಯಾಪಕರು | ಸದಸ್ಯರು |
| 25. | ಡಾ. ರಾಜೇಶ್ವರ್ ಎ.ಎನ್. ಪ್ರಾಧ್ಯಾಪಕರು | ಸದಸ್ಯರು |
| 26. | ಡಾ. ಸರ್ವಮಂಗಳ ಜಿ. ಪ್ರಾಧ್ಯಾಪಕರು | ಸದಸ್ಯರು |
| 27. | ಡಾ. ಪಾಟೀಲ್ ಸಂಗನಗೌಡ ಪ್ರಾಧ್ಯಾಪಕರು | ಸದಸ್ಯರು |
| 28. | ಡಾ. ಎಸ್.ವಿ. ಕೃಷ್ಣಮೂರ್ತಿ, ಪ್ರಾಧ್ಯಾಪಕರು | ಸದಸ್ಯರು |
| 29. | ಡಾ. ವೆಂಕಟೇಶ್ ಎಸ್. ಪ್ರಾಧ್ಯಾಪಕರು | ಸದಸ್ಯರು |
| 30. | ಡಾ. ಜಗನ್ನಾಥ ಕೆ. ಡಾಂಗೆ. ಪ್ರಾಧ್ಯಾಪಕರು | ಸದಸ್ಯರು |
| 31. | ಡಾ. ಗುರುಲಿಂಗಯ್ಯ ಎಂ. ಪ್ರಾಧ್ಯಾಪಕರು | ಸದಸ್ಯರು |
| 32. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 33. | ಡಾ. ನರಸಿಂಹಮೂರ್ತಿ ಎಸ್.ಕೆ. ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 34. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 35. | ಡಾ. ಪ್ರಶಾಂತ್ ನಾಯಕ್., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 36. | ಡಾ. ಎನ್.ಡಿ. ವಿರೂಪಾಕ್ಷ ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |
| 37. | ಶ್ರೀ ಬಂಗಾರಪ್ಪ ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 38. | ಪ್ರೊ. ಎನ್.ಬಿ. ತಿಪ್ಪೇಸ್ವಾಮಿ ನಿರ್ದೇಶಕರು, ಐ.ಕ್ಯೂ.ಎ.ಸಿ. | ವಿಶೇಷ ಆಹ್ವಾನಿತರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ. | ಸದಸ್ಯರು |
| 4. | ಡಾ. ಮಧು ಜಿ., ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀಮತಿ ಅನುಪಮ | ಸದಸ್ಯರು |
| 6. | ಪ್ರೊ. ಹಿರೇಮಣಿ ನಾಯ್ಕ ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ ಆಹ್ವಾನಿತರು |

**<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000, ಪ್ರಕರಣ–30(1) IV ರನ್ವಯ ವಿದ್ಯಾವಿಷಯಕ ಪರಿಷತ್ತಿಗೆ ನೂತನವಾಗಿ ಸರ್ಕಾರದಿಂದ ನೇಮಕಗೊಂಡ ವಿಧಾನಸಭಾ ಸದಸ್ಯರುಗಳಾದ ಶ್ರೀ ಬಿ.ಕೆ. ಸಂಗಮೇಶ್ವರ, ಮಾನ್ಯ ಶಾಸಕರು, ಭದ್ರಾವತಿ ವಿಧಾನಸಭಾ ಕ್ಷೇತ್ರ ಹಾಗೂ ಶ್ರೀ ಹೆಚ್.ಡಿ.ತಮ್ಮಯ್ಯ, ಮಾನ್ಯ ಶಾಸಕರು, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ಇವರು ಮತ್ತು ಕ.ರಾ.ವಿ. ಅಧಿನಿಯಮ 2000, ಪ್ರಕರಣ–30(1) VI ರನ್ವಯ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಾದ ಶ್ರೀ ಸಣ್ಣಹನುಮಪ್ಪ, ಜಿ., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ ಹಾಗೂ ಶ್ರೀ ಅನಂತ, ಎಸ್., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ ಮತ್ತು ಕರಾವಿ ಅಧಿನಿಯಮ 2000, ಪ್ರಕರಣ–30(1) VIII ರ ಪ್ರಕಾರ ನಾಮನಿರ್ದೇಶನಗೊಂಡ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪ್ರಾಧ್ಯಾಪಕರುಗಳಾದ ಪ್ರೊ.ಎ.ಎನ್.ರಾಜೇಶ್ವರ, ಜೀವರಸಾಯನಶಾಸ್ತ್ರ ವಿಭಾಗ, ಪ್ರೊ.ಸರ್ವಮಂಗಳ, ಜಿ., ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಪ್ರೊ. ಪಾಟೀಲ್ ಸಂಗನಗೌಡ, ಎಸ್., ಶಿಕ್ಷಣಶಾಸ್ತ್ರ ವಿಭಾಗ, ಪ್ರೊ.ಬಿ.ಹೆಚ್.ನಾಗ್ಯಾನಾಯ್ಕ, ಇಂಗ್ಲಿಷ್ ವಿಭಾಗ, ಪ್ರೊ. ನಾಗರಾಜ, ಪ್ರಾಣಿಶಾಸ್ತ್ರ ವಿಭಾಗ ಹಾಗೂ ಕರಾವಿ ಅಧಿನಿಯಮ 2000, ಪ್ರಕರಣ–30(1) IX ರ ಮೇರೆಗೆ ನೇಮಕಗೊಂಡ ಡೀನರುಗಳಾದ ಪ್ರೊ.ಎಸ್.ವಿ.ಕೃಷ್ಣಮೂರ್ತಿ, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಪ್ರೊ.ಜಗನ್ನಾಥ, ಕೆ. ಡಾಂಗೆ, ಶಿಕ್ಷಣ ನಿಕಾಯ, ಪ್ರೊ.ಗುರುಲಿಂಗಯ್ಯ, ಎಂ., ಕಲಾ ನಿಕಾಯ ಇವರುಗಳನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ನೂತನ ಪದನಿಮಿತ್ತ ಅಧ್ಯಕರು, ಸದಸ್ಯಕಾರ್ಯದರ್ಶಿ ಮತ್ತು ಸದಸ್ಯರುಗಳಾದ ಘನತೆವೆತ್ತ ಕುಲಾಧಿಪತಿಯವರಿಂದ ನೇಮಕಗೊಂಡ ಮಾನ್ಯ ಕುಲಪತಿಯವರಾದ (ಆ್ಯಕ್ಟಿಂಗ್) ಪ್ರೊ. ವೆಂಕಟೇಶ್, ಎಸ್., ಸರ್ಕಾರದಿಂದ ನೇಮಕಗೊಂಡ ಕುಲಸಚಿವರಾದ (ಹೆಚ್ಚುವರಿ ಹೊಣೆ) ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ, ಐ.ಎ.ಎಸ್., ಕುಲಸಚಿವ (ಮೌಲ್ಯಮಾಪನ) ಆದ ಪ್ರೊ.ಗೋಪಿನಾಥ, ಎಸ್.ಎಂ., ಹಣಕಾಸು ಅಧಿಕಾರಿಗಳಾದ ಶ್ರೀ ಬಂಗಾರಪ್ಪ, ಕೆ.ಎಸ್.ಎ.ಎಸ್., ಮತ್ತು ದೂರ ಶಿಕ್ಷಣ ನಿರ್ದೇಶಕರಾಗಿ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಪ್ರೊ. ಹಿರೇಮಣಿ ನಾಯ್ಕ, ಆರ್., ಇವರುಗಳನ್ನು ಸನ್ಮಾನಿಸಲಾಯಿತು.

ಜೊತೆಗೆ ವಿದ್ಯಾವಿಷಯಕ ಪರಿಷತ್‌ನ ಸದಸ್ಯರಾಗಿ ಸೇವೆ ಸಲ್ಲಿಸಿ ಸದಸ್ಯತ್ವದಿಂದ ಬಿಡುಗಡೆ ಹೊಂದಿದ ಡೀನರುಗಳಾದ ಪ್ರೊ. ಯೋಗೀಶ್ ಎಸ್.ಎನ್., ಕಲಾ ನಿಕಾಯದ ಡೀನರು, ಪ್ರೊ. ಗೀತಾ ಸಿ. ಶಿಕ್ಷಣ ನಿಕಾಯದ ಡೀನರು, ಪ್ರಾಧ್ಯಾಪಕರುಗಳಾದ ಪ್ರೊ. ನರಸಿಂಹಮೂರ್ತಿ ಎಸ್.ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ವಿಭಾಗ, ಪ್ರೊ. ಎಸ್. ಚಂದ್ರಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ, ಪ್ರೊ. ಪದ್ಮಮ್ಮ ಎಸ್., ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಪ್ರೊ. ಆರ್ತೋಬ ನಾಯಕ್ ವೈ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಪ್ರೊ. ಶಿವಾನಂದ ಕೆಳಗಿನ ಮನೆ ಪ್ರಾಧ್ಯಾಪಕರು, ಕನ್ನಡ ಭಾರತಿ ವಿಭಾಗ, ಹಾಗೂ ಸಂಯೋಜಿತ ಕಾಲೇಜುಗಳ

ಪ್ರಾಂಶುಪಾಲರುಗಳಾದ ಡಾ. ಹೆಚ್. ಎಸ್. ವಿರೂಪಾಕ್ಷಪ್ಪ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು, ಡಾ. ದುಗ್ಗಪ್ಪ ಎಂ.ಸಿ., ಪ್ರಾಂಶುಪಾಲರು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ (ನಿವೃತ್ತ) ಹಾಗೂ ಕುಲಸಚಿವ (ಪರೀಕ್ಷಾಂಗ) ರಾಗಿದ್ದ ಪ್ರೊ. ನವೀನ್ ಕುಮಾರ್ ಎಸ್.ಕೆ. ಇವರುಗಳು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಶೈಕ್ಷಣಿಕ ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ಮಹತ್ತರ ಸಲಹೆ ಸೂಚನೆಗಳನ್ನು ನೀಡಿ ವಿಶ್ವವಿದ್ಯಾಲಯದ ಶ್ರೇಯೋಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಸಭೆಯಲ್ಲಿ ಸ್ಮರಿಸಿ ಅವರುಗಳನ್ನು ಅಭಿನಂದಿಸಲಾಯಿತು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಮಾನ್ಯ ಕುಲಪತಿಯವರು ವಿಶ್ವವಿದ್ಯಾಲಯದ 2023–24ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ ಪದವಿಗಳ ಪ್ರವೇಶಕ್ಕಾಗಿ ಕೌನ್ಸಲಿಂಗ್‌ನ್ನು ದಿನಾಂಕ:27–11–2023 ರಿಂದ 29–11–2023 ರವರೆಗೆ ಏರ್ಪಡಿಸಲಾಗಿದ್ದು, ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು. ನಂತರ, ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**2023:ಎಸಿ–2.01** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ರನ್ವಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳಿಗೆ ಸಂಬಂಧಿಸಿದ ವರದಿ.

**ನಿರ್ಣಯ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು, ಅಧ್ಯಯನ ಪೀಠಗಳು ಸೇರಿದಂತೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ವಿನಿಯಮಗಳನ್ನು ಸರ್ಕಾರವು ಕೆಲವು ಸ್ಪಷ್ಟೀಕರಣ ಕೇಳಿ ಹಿಂದಿರುಗಿಸಿದೆ. ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆ ಹಾಗೂ ಸರ್ಕಾರದ ಹಣಕಾಸು ಇಲಾಖೆಯೊಂದಿಗೆ ಸಂಪರ್ಕದಲ್ಲಿದ್ದು, ಸರ್ಕಾರ ಕೇಳಿರುವ ಸ್ಪಷ್ಟೀಕರಣಗಳಿಗೆ ಅಗತ್ಯ ಮಾಹಿತಿಗಳೊಂದಿಗೆ ಸಿದ್ಧಪಡಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ಸರ್ಕಾರಕ್ಕೆ ಮರು ಸಲ್ಲಿಸಲಾಗುವುದು ಎಂದರು.

**2023:ಎಸಿ–2.02:** **ಮಾನ್ಯ ಕುಲಪತಿಗಳು ಅಥವಾ ಸಿಂಡಿಕೇಟ್ ಮಂಡಿಸಿದ ವಿಷಯಗಳು**

**ನಿರ್ಣಯ:** ಯಾವುದೂ ಇಲ್ಲ.

**ಪ್ರಾಧಿಕಾರಗಳ ವಿಭಾಗ**

**2023:ಎಸಿ–2.03:** ದಿನಾಂಕ:18–03–2023 ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"**ಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:18–03–2023 ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"**ಯ ನಡಾವಳಿಗಳನ್ನು ದೃಢೀಕರಣಕ್ಕಾಗಿ ಕುಲಸಚಿವರು ಸಭೆಗೆ ಮಂಡಿಸಿದರು. ಸದಸ್ಯರುಗಳು ಮಾತನಾಡುತ್ತಾ ಸಭೆಯ ಸಭಾ ಸೂಚಿಯು ಕನಿಷ್ಟ ಒಂದು ವಾರ ಮುಂಚಿತವಾಗಿಯಾದರೂ ಸದಸ್ಯರಿಗೆ ತಲುಪಬೇಕು. ಇಲ್ಲವಾದಲ್ಲಿ ಅಜೆಂಡಾವನ್ನು ಅಭ್ಯಸಿಸಿ ಸಭೆಯಲ್ಲಿ ಚರ್ಚಿಸಲು ಸಾಧ್ಯವಾಗುವುದಿಲ್ಲ. ಈ ಸಭೆಯ ಕಾರ್ಯಸೂಚಿಯು ತಡವಾಗಿ ತಲುಪಿರುವುದರಿಂದ ಚರ್ಚಿಸಲು ಕಷ್ಟವಾಗುತ್ತದೆ ಎಂದರು. ಸದಸ್ಯರಾದ ಡಾ.ರವಿಕಿರಣ,ಹೆಚ್.ಕೆ.,ರವರು ಮಾತನಾಡಿ ವಿಶ್ವವಿದ್ಯಾಲಯದ ಪ್ರಾಧಿಕಾರಗಳಾದ ಅಧ್ಯಯನ ಮಂಡಳಿ, ನಿಕಾಯಗಳು, ವಿದ್ಯಾವಿಷಯಕ ಪರಿಷತ್ತು ಹಾಗೂ ಸಿಂಡಿಕೇಟ್‌ಗಳಿಗೆ ನಾಮನಿರ್ದೇಶಿತರಾಗಿರುವ ವಿಶ್ವವಿದ್ಯಾಲಯದ ಅಧ್ಯಾಪಕರುಗಳು ಸಭೆಗಳಿಗೆ ಗೈರುಹಾಜರಾಗುತ್ತಿದ್ದಾರೆ. ಶೈಕ್ಷಣಿಕ ಹಾಗೂ ಸಂಶೋಧನೆಗೆ ಸಂಬಂಧಪಟ್ಟಂತೆ ಅಗತ್ಯ ಚರ್ಚೆ ಹಾಗೂ ನಿರ್ಣಯಗಳಲ್ಲಿ ಅಧ್ಯಾಪಕರು ಪಾಲ್ಗೊಳ್ಳದಿರುವುದು ಸರಿಯಲ್ಲ. ಸಕ್ಷಮ ಪ್ರಾಧಿಕಾರಗಳನ್ನು ಯಾರೂ ಹಗುರವಾಗಿ ಪರಿಗಣಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ, ಗೈರುಹಾಜರಾದ ಅಧ್ಯಾಪಕರಿಂದ ಸೂಕ್ತ ಸಮಜಾಯಿಷಿ ಪಡೆದು ಮುಂದಿನ ಸಭೆಗೆ ಸಲ್ಲಿಸುವಂತೆ ಹಿಂದಿನ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ, ವಿಶ್ವವಿದ್ಯಾಲಯವು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಭೆಯ ನಿರ್ಣಯಗಳನ್ನು ಆಡಳಿತವು ಅನುಷ್ಠಾನಕ್ಕೆ ತರದಿರುವುದು ಸರಿಯಲ್ಲ. ಆದುದರಿಂದ ಮುಂದಿನ ಸಭೆಗೆ ಈ ಬಗ್ಗೆ ವರದಿ ನೀಡುವಂತೆ ಕೋರಿದರು. ಬಹಳಷ್ಟು ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಸದಸ್ಯರಾದ ಶ್ರೀ ರಮೇಶ್ ಹೆಗಡೆರವರು ಮಾತನಾಡಿ, ಸಭೆಯ ನಿರ್ಣಯಗಳು ಸಮರ್ಪಕವಾಗಿ ವಿಶ್ವವಿದ್ಯಾಲಯದಲ್ಲಿ ಜಾರಿಯಾಗುತ್ತಿಲ್ಲ. ಹೀಗಾದರೆ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಉದ್ದೇಶವೇನು ಎಂದರು. ಪ್ರೊ.ಎಸ್.ಕೆ. ನರಸಿಂಹಮೂರ್ತಿಯವರು ಮಾತನಾಡಿ ಕಳೆದ 4–5 ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಕುರಿತಾಗಿ ತೆಗೆದುಕೊಂಡ ಕ್ರಮಗಳ ಮಾಹಿತಿ ಬಂದಿಲ್ಲ ಎಂದರು. ಮನೋಜ್ ಸಲ್ಡಾನರವರು ಮಾತನಾಡಿ, ಹಿಂದಿನ ಸಭೆಯಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಗಿತ್ತು. ಆದರೆ ಕ್ರಮ ಆಗಿಲ್ಲ ಎಂದರು. ಕುಲಸಚಿವರು ಮಾಹಿತಿ ನೀಡಿ ಮಾತನಾಡಿ, ವಿಶ್ವವಿದ್ಯಾಲಯವು ಯಾವುದೇ ಹೊಸ ಕೋರ್ಸ್ ಆರಂಭಿಸಲು ಸರ್ಕಾರದ ಅನುಮೋದನೆ ಪಡೆಯಬೇಕು. ಅದಕ್ಕೆ ಸಿಬ್ಬಂದಿ ಹಾಗೂ ಹಣಕಾಸಿನ ಅವಶ್ಯಕತೆ ಇರುತ್ತದೆ. ಇದರಲ್ಲಿ ಹಣಕಾಸಿನ ಬಾದ್ಯತೆ ಇರುವುದರಿಂದ ಸರ್ಕಾರದ ಅನುಮೋದನೆ ದೊರೆಯುವುದು ಕಷ್ಟವಾಗುತ್ತದೆ ಎಂದರು. ಸದಸ್ಯರಾದ ಶ್ರೀ ಪರಮೇಶ ಮಸಲವಾಡರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷಗಳ ಹಿಂದೆ ಆರಂಭಿಸಲಾದ ಫುಡ್ ಟೆಕ್ನಾಲಜಿ ಕೋರ್ಸ್‌ಗೆ ಸರ್ಕಾರದ ಅನುಮೋದನೆ ಆಗಿದೆಯೇ ಎಂದರು. ವಿಜ್ಞಾನ ನಿಕಾಯದ ಡೀನ್ ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸದರಿ ಕೋರ್ಸ್‌ನ ವಿನಿಯಮ ಆಗಿಲ್ಲ. ಅಲ್ಲದೆ, ಸದರಿ ವಿಭಾಗಕ್ಕೆ ಮೂಲಭೂತ ಸೌಲಭ್ಯಗಳನ್ನು ಕೂಡ ಒದಗಿಸಲು ಕಷ್ಟವಾಗುತ್ತಿದೆ. ಆದುದರಿಂದ, ಹೊಸ ಕೋರ್ಸ್‌ಗಳನ್ನು ಆರಂಭಿಸುವಾಗ ಎಲ್ಲವನ್ನೂ ಕೂಲಂಕುಶವಾಗಿ ಪರಿಶೀಲಿಸಬೇಕಾಗುತ್ತದೆ ಎಂದರು. ಪ್ರೊ.ಜಿ.ಪ್ರಶಾಂತನಾಯಕರವರು ಮಾತನಾಡಿ, ಈ ಹಿಂದೆ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಸ್ವಾಯತ್ತತೆ ಇತ್ತು. ಇದರಿಂದಾಗಿ ಹೊಸ ಕೋರ್ಸ್‌ಗಳನ್ನು ಆರಂಭಿಸಬಹುದಾಗಿತ್ತು. ಈಗ ಸರ್ಕಾರದ ಅನುಮೋದನೆ ಪಡೆಯದೇ ಹೊಸ ಕೋರ್ಸ್ ಆರಂಭಿಸುವುದು ಕಷ್ಟ ಎಂದರು.

ಸದಸ್ಯರಾದ ಶ್ರೀ ಮನೋಜ್ ಸಲ್ಡಾನರವರು ಮಾತನಾಡಿ ಹಿಂದಿನ ಸಭೆಯ ವಿಷಯ ಸಂಖ್ಯೆ:2023:ಎಸಿ–1.07ರಲ್ಲಿ ಕಂಪ್ಯೂಟರ್‌ಗಳನ್ನು ಹೊಸದಾಗಿ ಖರೀದಿಸುವ ಬದಲಾಗಿ, ಇರುವ ಕಂಪ್ಯೂಟರ್‌ಗಳನ್ನೇ ಆಧುನಿಕ ತಂತ್ರಜ್ಞಾನ ಆಧರಿಸಿ ಕಡಿಮೆ ಖರ್ಚಿನಲ್ಲಿ ದುರಸ್ತಿ ಮಾಡಿ ಹೊಸ ಕಂಪ್ಯೂಟರ್ ರೀತಿಯಲ್ಲಿಯೇ ಅಪ್‌ಡೇಟ್ ಮಾಡುತ್ತಾರೆ. ಇದರಿಂದ ಲಕ್ಷಾಂತರ ರೂಪಾಯಿಗಳ ಹಣ ಉಳಿತಾಯವಾಗಲಿದ್ದು, ಈ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುವಂತೆ ನಿರ್ಣಯಿಸಲಾಗಿತ್ತು. ಆದರೆ, ಈ ವರೆಗೆ ಯಾವುದೇ ಕ್ರಮವಾಗಿಲ್ಲ ಎಂದರು. ಸದಸ್ಯರಾದ ಪ್ರೊ.ಜಗನ್ನಾಥ ಕೆ. ಡಾಂಗೆರವರು ಮಾತನಾಡಿ ಪ್ರಸ್ತುತ ಇರುವ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳ ಸ್ಥಿತಿಗತಿಯ ಕುರಿತಾಗಿ ಪರಿಶೀಲನೆ ಆಗಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಇದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಲಾಗುವುದು. ಸಮಿತಿಯು ಎಲ್ಲಾ ವಿಭಾಗಗಳಿಗೆ ಭೇಟಿ ನೀಡಿ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳ ಸ್ಥಿತಿಗತಿಯ ಕುರಿತಾಗಿ ಸಲ್ಲಿಸುವ ವರದಿ ಆಧಾರದಲ್ಲಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ದಿನಾಂಕ:18–03–2023 ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"**ಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಿದ ಸಭೆಯು, ಮುಂದಿನ ಸಭೆಯಲ್ಲಿ ನಡಾವಳಿಗಳನ್ನು ದೃಢೀಕರಣಕ್ಕಾಗಿ ಮಂಡಿಸುವ ಸಮಯದಲ್ಲಿ ಸದರಿ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮದ ಮಾಹಿತಿಗಳನ್ನು ಒದಗಿಸಬೇಕೆಂದು ನಿರ್ಣಯಿಸಲಾಯಿತು.

**2023:ಎಸಿ–2.04:** ದಿನಾಂಕ:21–06–2023 ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಮಿತಿ ಆನ್‌ಲೈನ್ ಸಭೆ"**ಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:21–06–2023 ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಮಿತಿ ಆನ್‌ಲೈನ್ ಸಭೆ"**ಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2023:ಎಸಿ–2.05:** ದಿನಾಂಕ:22–07–2023 ರಂದು ನಡೆದ **"33ನೇ ವಾರ್ಷಿಕ ಘಟಿಕೋತ್ಸವದ ಕುರಿತಾದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆ"**ಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:22–07–2023 ರಂದು ನಡೆದ "33ನೇ ವಾರ್ಷಿಕ ಘಟಿಕೋತ್ಸವದ ಕುರಿತಾದ

ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆ"ಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ದೃಢೀಕರಿಸಿತು.

**2023:ಎಸಿ–2.06:** 2022–23ನೇ ಸಾಲಿನ ವಿಶ್ವವಿದ್ಯಾಲಯದ **ವಾರ್ಷಿಕ ವರದಿಯ ಅನುಮೋದನೆ** ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 50ರ ಪ್ರಕಾರ ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ಸಿದ್ಧಪಡಿಸಿದ ವಿಶ್ವವಿದ್ಯಾಲಯದ 2022–23ನೇ ಸಾಲಿನ ಕನ್ನಡ ಮತ್ತು ಆಂಗ್ಲ ಅವತರಿಣಿಕೆಯ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

**2023:ಎಸಿ–2.07:** ದಿನಾಂಕ:07–11–2023 ರಂದು ನಡೆದ **ಕಲಾ ನಿಕಾಯ** ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:07–11–2023ರಂದು ನಡೆದ ಕಲಾ ನಿಕಾಯ ಸಭೆಯ ನಡಾವಳಿಗಳನ್ನು ಕಲಾ ನಿಕಾಯದ ಡೀನರಾದ ಪ್ರೊ.ಎಂ.ಗುರುಲಿಂಗಯ್ಯರವರು ಅನುಮೋದನೆಗಾಗಿ ಮಂಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಮತಿ ಗೀತಾಂಜಲಿರವರು ಕಾಲೇಜುಗಳು ಆರಂಭವಾಗುವ ಮುನ್ನವೇ ಪಠ್ಯಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರಗಳಲ್ಲಿ ಅನುಮೋದಿಸಿ ಪರಿಚಲಿಸಬೇಕಾಗಿತ್ತು. ಆದರೆ, ಕಾಲೇಜುಗಳು ಆರಂಭವಾಗಿ ಬಹಳ ದಿನಗಳ ನಂತರ ಅಧ್ಯಯನ ಮಂಡಳಿ, ನಿಕಾಯ ಸಭೆಗಳಾಗಿವೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ವಿಶ್ವವಿದ್ಯಾಲಯವು ಯಾವುದೇ ಪಠ್ಯಕ್ರಮವನ್ನು ರಚಿಸುವುದಿಲ್ಲ. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಎನ್.ಇ.ಪಿ., ಪ್ರಕಾರ ಸಿದ್ಧಪಡಿಸಿ ಕಳುಹಿಸುವ ಪಠ್ಯಕ್ರಮವನ್ನೇ ಅನುಸರಿಸಬೇಕು. ಉನ್ನತ ಶಿಕ್ಷಣ ಪರಿಷತ್ತು ಕಳುಹಿಸಿದ್ದ ಪಠ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿಯೇ ಕಾಲೇಜುಗಳಿಗೆ ಕಳುಹಿಸಲಾಗಿತ್ತು. ಇದರಿಂದಾಗಿ ಪಾಠ ಪ್ರವಚನಗಳಿಗೆ ಯಾವುದೇ ತೊಂದರೆ ಆಗಿಲ್ಲ ಎಂದರು.

ಪ್ರಾಂಶುಪಾಲರಾದ ಡಾ.ಶೇಖರ್‌ರವರು ಮಾತನಾಡಿ Skill Enhancement Cource (SEC)- ಅಡಿಯಲ್ಲಿ Employability Skills or Cyber Security ಪತ್ರಿಕೆಗಳನ್ನು ಬೋಧಿಸುವ ಬಗ್ಗೆ ಸ್ಪಷ್ಟತೆ ಇಲ್ಲ ಎಂದರು. ಎನ್.ಇ.ಪಿ. ನೋಡಲ್ ಆಫೀಸರ್ ಆದ ಪ್ರೊ.ಸೈಯದ್ ಅಶ್ಫಕ್ ಅಹಮದ್‌ರವರು ಮಾತನಾಡಿ ಇದು ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪಠ್ಯಕ್ರಮವಲ್ಲ. ಇದನ್ನು ಸರ್ಕಾರದ ಕರ್ನಾಟಕ ರಾಜ್ಯ ಉನ್ನತಶಿಕ್ಷಣ ಪರಿಷತ್ತು ಸಿದ್ಧಪಡಿಸಿ ಒದಗಿಸಿದ್ದು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳೂ ಅಳವಡಿಸಿಕೊಂಡಿವೆ. Cyber Security ಪತ್ರಿಕೆಯು ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಹಾಗೂ Employability Skills ಪತ್ರಿಕೆಯು ವಾಣಿಜ್ಯ ವಿಭಾಗಕ್ಕೆ ಸಂಬಂಧಿಸಿದ್ದಾಗಿದ್ದು, ಆಯಾ ವಿಭಾಗದ ಅಧ್ಯಾಪಕರು ಇದನ್ನು ಬೋಧಿಸಬೇಕು. ಇಲ್ಲವಾದಲ್ಲಿ ಆ ಕ್ಷೇತ್ರದ ಪರಿಣಿತರ ಸೇವೆ ಪಡೆಯಬಹುದು. ಕಾಲೇಜಿನಲ್ಲಿರುವ ಲಭ್ಯ ಸಂಪನ್ಮೂಲಗಳನ್ನು ಆಧರಿಸಿ ಪತ್ರಿಕೆಗಳನ್ನು ಅಳವಡಿಸಿಕೊಳ್ಳುವುದು ಉತ್ತಮ ಎಂದರು. ಮುಂದುವರೆದು ಮಾತನಾಡಿದ ಅವರು, ಈ ಪತ್ರಿಕೆಗಳ ಪಠ್ಯಕ್ರಮ, ಅಧ್ಯಯನ ಸಾಮಗ್ರಿ, ಕೋರ್ಸ್ ಕ್ರೆಡಿಟ್, ಬೋಧನಾ ಅವಧಿ, ಅಂಕಗಳ ಹಂಚಿಕೆ ಇತ್ಯಾದಿಗಳ ಬಗ್ಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ವಿವರಗಳನ್ನು ಒದಗಿಸಿದ್ದು, ಅದನ್ನು ಕಾಲೇಜುಗಳಿಗೆ ಕಳುಹಿಸಲಾಗಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ದಿನಾಂಕ:07–11–2023ರಂದು ನಡೆದ ಕಲಾ ನಿಕಾಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2023:ಎಸಿ–2.08:** ದಿನಾಂಕ:07–11–2023 ರಂದು ನಡೆದ **ವಾಣಿಜ್ಯ ನಿಕಾಯ** ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ವಾಣಿಜ್ಯ ನಿಕಾಯದ ಡೀನರಾದ ಪ್ರೊ.ವೆಂಕಟೇಶ್, ಎಸ್.,ರವರು ಮಂಡಿಸಿದ ದಿನಾಂಕ:07–11–2023ರಂದು ಜರುಗಿದ ವಾಣಿಜ್ಯ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

**2023:ಎಸಿ–2.09:** ದಿನಾಂಕ:08–11–2023 ರಂದು ನಡೆದ **ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ** ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ಎಸ್.ವಿ.ಕೃಷ್ಣಮೂರ್ತಿ ರವರು ಮಂಡಿಸಿದ ದಿನಾಂಕ:07–11–2023ರಂದು ಜರುಗಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಮಂಡಿಸಿದರು. ಚರ್ಚೆಯ ನಂತರ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2023:ಎಸಿ–2.10:** ದಿನಾಂಕ:08–11–2023 ರಂದು ನಡೆದ **ಶಿಕ್ಷಣ ನಿಕಾಯ** ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಶಿಕ್ಷಣ ನಿಕಾಯದ ಡೀನರಾದ ಪ್ರೊ.ಜಗನ್ನಾಥ ಕೆ ಡಾಂಗೆರವರು ಮಂಡಿಸಿದ ದಿನಾಂಕ:08–11–2023 ರಂದು ನಡೆದ ಶಿಕ್ಷಣ ನಿಕಾಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**ಹಣಕಾಸು ವಿಭಾಗ**

**2023:ಎಸಿ–2.11:** 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಹಣಕಾಸು ಅಧಿಕಾರಿಗಳು ಮಂಡಿಸಿದ ವಿಶ್ವವಿದ್ಯಾಲಯದ 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ಕರಡನ್ನು ಸಭೆಯು ಅನುಮೋದಿಸಿತು.

**2023:ಎಸಿ–2.12:** 2019–20 ಮತ್ತು 2020–21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಗಳ ಅನುಮೋದನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 47(3)ರನ್ವಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ವಿಶ್ವವಿದ್ಯಾಲಯದ 2019–20 ಮತ್ತು 2020–21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆ ನಡೆಸಿ ಸಲ್ಲಿಸಿದ್ದ ವರದಿಗೆ, ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ವಿಶ್ವವಿದ್ಯಾಲಯವು ಸಿದ್ಧಪಡಿಸಿರುವ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.

**ಕಾಲೇಜು ಅಭಿವೃದ್ಧಿ ಪರಿಷತ್**

**2023:ಎಸಿ–2.13:** ಭದ್ರಾವತಿಯ ಡಿ.ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿನ ಸಂಯೋಜನೆ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸುವ ಕುರಿತು.

**ಚರ್ಚೆ:** ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ. ನಾಗರಾಜರವರು ವಿಷಯ ಮಂಡಿಸಿ ಮಾತನಾಡುತ್ತಾ, ಭದ್ರಾವತಿಯ ಡಿ.ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿಗೆ 2022–23ನೇ ಸಾಲಿನಲ್ಲಿ PAR (Performance Apprisal Report) ಸಲ್ಲಿಸಿಲ್ಲವೆಂಬ ಕಾರಣದಿಂದ ಎನ್.ಸಿ.ಟಿ.ಇ. ಮಾನ್ಯತೆ ನವೀಕರಿಸಿರಲಿಲ್ಲ. ಆದುದರಿಂದ, ಸದರಿ ಕಾಲೇಜಿನವರು ಎನ್.ಸಿ.ಟಿ.ಇ., ವಿರುದ್ಧ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆದರೆ, ಸದರಿ ತಡೆಯಾಜ್ಞೆ 2022–23ನೇ ಸಾಲಿಗೆ ಸೀಮಿತಗೊಂಡಿದ್ದರಿಂದ 2023–24ನೇ ಸಾಲಿನಲ್ಲಿ ಸ್ಥಳೀಯ ತಪಾಸಣಾ ಸಮಿತಿಯು ಸದರಿ ಕಾಲೇಜಿನ ಮುಂದುವರೆದ ಸಂಯೋಜನೆಗೆ ಶಿಫಾರಸ್ಸು ಮಾಡಿರಲಿಲ್ಲ. ಈ ನಡುವೆ 2023–24ನೇ ಸಾಲಿನಲ್ಲಿ ಕೂಡ ಎನ್.ಸಿ.ಟಿ.ಇ. ಮಾನ್ಯತೆ ನೀಡುವಂತೆ ಸದರಿ ಕಾಲೇಜಿನವರೂ ಸೇರಿದಂತೆ ಒಂದು ಒಕ್ಕೂಟದ ಮೂಲಕ ದೆಹಲಿ ಉಚ್ಚನ್ಯಾಯಾಲಯದ ಮೊರೆ ಹೋಗಿದ್ದು, ಘನ ನ್ಯಾಯಾಲಯವು ಪ್ರತಿವರ್ಷ PAR ಸಲ್ಲಿಸುವುದು ಸಮರ್ಥನೀಯವಲ್ಲ ಎಂದು ಪರಿಗಣಿಸಿ ಕಾಲೇಜುಗಳ ಒಕ್ಕೂಟದ ಪರವಾಗಿ ತೀರ್ಪು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ, ಕಾನೂನು ಸಲಹೆ ಪಡೆದುಕೊಂಡು ಸದರಿ ಕಾಲೇಜಿಗೆ ಮತ್ತೊಂದು ಸ್ಥಳೀಯ ತಪಾಸಣಾ ಸಮಿತಿ ಭೇಟಿ ನೀಡಿದ್ದು, ಸಂಯೋಜನೆ ಮುಂದುವರಿಸಲು ಶಿಫಾರಸ್ಸು ಮಾಡಿದ್ದು, ಇದನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಭದ್ರಾವತಿಯ ಡಿ.ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿನ 2022–23ನೇ ಸಾಲಿನ ಸಂಯೋಜನಾ ವರದಿಯನ್ನು ಸಭೆಯು ಅನುಮೋದಿಸಿತು.

**2023:ಎಸಿ–2.14:** "Hoysala Karnataka Parisara" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರ ಸಂಘ, ಜೈಲ್ ರಸ್ತೆ, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ (ಎಂ.ಎಸ್ಸಿ.–ಪರಿಸರ ವಿಜ್ಞಾನ)ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ **"ಹೊಯ್ಸಳ ಕರ್ನಾಟಕ ಪರಿಸರ"** ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023:ಎಸಿ–2.15:** "Baseerunnisa Nazeer Pasha" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಡಾ. ಹಫೀಜ್ ಕರ್ನಾಟಕಿ ಬಿನ್ ನಜೀರ್ ಪಾಶ, ಜಯನಗರ 1ನೇ ತಿರುವು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಉರ್ದು ಅಧ್ಯಯನ (ಎಂ.ಎ.–ಉರ್ದು) ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ **"ಬಶೀರುನ್ನೀಸ ನಜೀರ್ ಪಾಶ"** ಹೆಸರಿನಲ್ಲಿ ವಿಶ್ವವಿದ್ಯಾಲಯದ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023:ಎಸಿ–2.16:** "Smt. Soubhagya and Dr. B.U. Kannappanavar" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಡಾ.ಬಿ.ಯು. ಕಣ್ಣಪ್ಪನವರ್‌ರವರ ಸಂಶೋಧನಾ ವಿದ್ಯಾರ್ಥಿಗಳು, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ **"ಶ್ರೀಮತಿ ಸೌಭಾಗ್ಯ ಮತ್ತು ಡಾ.ಬಿ.ಯು.ಕಣ್ಣಪ್ಪನವರ್"** ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ **"ದತ್ತಿನಿಧಿ ಸ್ವರ್ಣಪದಕ"** ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023:ಎಸಿ–2.17:** "Shanthala Spherocast" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ Shanthala Spherocast Private Limited, Shivamogga-Bhadravathi Industrial Area, Machenahalli, Nidige Post, Shivamoga ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಪರಿಸರ ವಿಜ್ಞಾನ (ಎಂ.ಎಸ್ಸಿ.–ಪರಿಸರ ವಿಜ್ಞಾನ) ಅಧ್ಯಯನ ವಿಭಾಗದಲ್ಲಿ (ರೆಗ್ಯುಲರ್) ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ "Shanthala Spherocast" ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ **"ದತ್ತಿನಿಧಿ ಸ್ವರ್ಣಪದಕ"** ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023:ಎಸಿ–2.18:** "Dr. Hafiz Karnataki" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಡಾ. ಹಫೀಜ್ ಕರ್ನಾಟಕಿ ಬಿನ್ ನಜೀರ್ ಪಾಶ, ಜಯನಗರ 1ನೇ ತಿರುವು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಕನ್ನಡ ಅಧ್ಯಯನ (ಎಂ.ಎ.–ಕನ್ನಡ) ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ **"ಡಾ.ಹಫೀಜ್ ಕರ್ನಾಟಕಿ"** ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನೋದನೆ ನೀಡಿತು.

**2023:ಎಸಿ–2.18(ಎ):** "Late Prof. Vidwan V.N. Bhat Memorial Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ದಾನಿಗಳಾದ ಶ್ರೀಮತಿ ನಿರ್ಮಲ ವಿ.ಎನ್.ಭಟ್ ಬಿನ್ ದಿ.ಪ್ರೊ.ವಿಧ್ವಾನ್ ವಿ.ಎನ್.ಭಟ್, ಜ್ಞಾನದೀಪ, 3ನೇ ತಿರುವು, ಸಹ್ಯಾದ್ರಿ ನಗರ, ವಿನೋಬನಗರ ಬಡಾವಣೆ, ಶಿವಮೊಗ್ಗ ಇವರು ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದ ಸ್ನಾತಕೋತ್ತರ ಸಂಸ್ಕೃತ (ಎಂ.ಎ. ಸಂಸ್ಕೃತ) ಅಧ್ಯಯನ ವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ದರ್ಶನಶಾಸ್ತ್ರ ಸ್ಪೆಷಲ್ (ಸಾಫ್ಟ್ ಕೋರ್) ಪೇಪರ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Late Prof. Vidwan V.N. Bhat Memorial Gold Medal" ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ

ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನಮೋದನೆ ನೀಡಿತು.

**2023:ಎಸಿ–2.18(ಬಿ):** ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಏಕರೂಪ ಶುಲ್ಕ ನಿಗದಿಪಡಿಸುವ ಕುರಿತು.

ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಈ ಹಿಂದೆ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಶುಲ್ಕ ಮತ್ತು ಸಂಭಾವನೆಯ ದರಗಳು ಬೇರೆ ಬೇರೆಯಾಗಿದ್ದವು. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪದ ಶುಲ್ಕ, ಏಕರೂಪದ ಪರೀಕ್ಷಾ ಸಂಭಾವನೆ ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಲು ಸರ್ಕಾರಕ್ಕೆ ವರದಿ ನೀಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಆಯ್ದ ಕುಲಪತಿಗಳು ಹಾಗೂ ಕುಲಸಚಿವರು ಮತ್ತು ಇತರೆ ತಜ್ಞರನ್ನು ಒಳಗೊಂಡ ಸಮಿತಿಯನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ರಚಿಸಿತ್ತು. ಸದರಿ ಸಮಿತಿಯು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿನ ಶುಲ್ಕ ಮತ್ತು ಸಂಭಾವನೆಗಳ ಮಾಹಿತಿಗಳನ್ನು ಪಡೆದುಕೊಂಡು, ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಏಕರೂಪದ ಶುಲ್ಕ ಮತ್ತು ಸಂಭಾವನೆಯನ್ನು ಜಾರಿಗೊಳಿಸುವ ಕುರಿತಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ಸಮಿತಿಯು ನೀಡಿರುವ ವರದಿಯ ಶಿಫಾರಸ್ಸುಗಳಿಗೆ ಸರ್ಕಾರವು ಸಹಮತಿಸಿ ಒಪ್ಪಿಗೆ ನೀಡಿರುವ ಬಗ್ಗೆ ತಿಳಿಸಿ, ಸಮಿತಿಯು ಶಿಫಾರಸ್ಸು ಮಾಡಿರುವ ವಿವಿಧ ಶುಲ್ಕಗಳನ್ನು ನಿಯಮಾನುಸಾರ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ನೀಡುವಂತೆ ತಿಳಿಸಿರುತ್ತಾರೆ. ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರು ಮಾತನಾಡುತ್ತಾ. ಈಗಾಗಲೇ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರವೇಶಗಳು ಮುಗಿದಿದ್ದು, ಸ್ನಾತಕೋತ್ತರ ಪದವಿಯ ಪ್ರವೇಶಾತಿ ಅಧಿಸೂಚನೆಯಲ್ಲಿಯೂ ಕೂಡ ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿದ್ದ ಶುಲ್ಕಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಆದುದರಿಂದ ಪರಿಷ್ಕೃತ ಶುಲ್ಕಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಬಹುದು ಎಂದ ಅವರು ಮುಂದುವರೆದು ಮಾತನಾಡಿ, ಪರಿಷ್ಕೃತ ಶುಲ್ಕಗಳಲ್ಲಿ ಆಗಿರುವ ವ್ಯತ್ಯಾಸ ಎಷ್ಟಿದೆ ಎಂದರು. ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡುತ್ತಾ, ಕೊರೋನಾ ಮುಂತಾದ ಕಾರಣಗಳಿಂದಾಗಿ ಕಳೆದ ನಾಲ್ಕೈದು ವರ್ಷಗಳಿಂದ ಶುಲ್ಕಗಳನ್ನು ಪರಿಷ್ಕರಿಸಿಲ್ಲವಾದ್ದರಿಂದ ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಕೆ ಮಾಡಿದಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ ಕಡಿಮೆ ಇತ್ತು. ಈಗ ಸರ್ಕಾರ ಪರಿಷ್ಕರಿಸಿರುವುದರಿಂದ ಕೆಲವು ಶುಲ್ಕಗಳಲ್ಲಿ ಸ್ವಲ್ಪಮಟ್ಟಿನ ಹೆಚ್ಚಳವಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಕೂಡ ಜಾಸ್ತಿಯಾಗುತ್ತದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಏಕರೂಪ ಶುಲ್ಕ ಮತ್ತು ಸಂಭಾವನೆ ದರಗಳನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಅನುಮೋದಿಸಿದ ಸಭೆಯು, ಈಗಾಗಲೇ ಸ್ನಾತಕ ಪದವಿಯ ಪ್ರವೇಶಗಳು ಮುಗಿದಿರುವುದರಿಂದ ಹಾಗೂ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಅಧಿಸೂಚನೆಯಲ್ಲಿಯೂ 2022–23ನೇ ಸಾಲಿನ ಶುಲ್ಕಗಳನ್ನೇ ಅಳವಡಿಸಿಕೊಳ್ಳಲು ಈಗಾಗಲೇ ಪ್ರಕಟಿಸಿರುವ ಹಿನ್ನೆಲೆಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವೇಶ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ವರ್ಷದಿಂದ ಅಳವಡಿಸಿಕೊಳ್ಳಲು ಮತ್ತು ಉಳಿದ ಎಲ್ಲಾ ಶುಲ್ಕ ಮತ್ತು ಸಂಭಾವನೆ ದರಗಳನ್ನು 2023–24ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು.

**2023:ಎಸಿ–2.18(ಸಿ):** ಪಿಹೆಚ್.ಡಿ. ವಿಷಯವನ್ನು Applied Geology ಬದಲು Geoinformatics ಎಂದು ಬದಲಾಯಿಸುವ ಬಗ್ಗೆ.

ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ.ಎಸ್.ವಿ.ಕೃಷ್ಣಮೂರ್ತಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಅನ್ವಯಿಕ ಭೂವಿಜ್ಞಾನ ಅಧ್ಯಯನ ವಿಭಾಗದಲ್ಲಿ Earth Science and Resource Management (ESRM) & Geoinformatics ಎಂಬ ಎರಡು ವಿಷಯಗಳಿದ್ದು, ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳು ಎರಡು ವಿಷಯಗಳಿಗೆ ಪ್ರವೇಶಾತಿ ಪಡೆದು ಅಧ್ಯಯನ ನಡೆಸುತ್ತಿದ್ದಾರೆ. ಆದರೆ, ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಅಧಿಸೂಚನೆಗಳಲ್ಲಿ ವಿಷಯವನ್ನು 'ಅನ್ವಯಿಕ ಭೂವಿಜ್ಞಾನ' ಎಂದು ನಮೂದಿಸಲಾಗುತ್ತಿದೆ. ಆದರೆ ಇದರಿಂದ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪದನಾಮದಲ್ಲಿ ತೊಂದರೆಯಾಗುತ್ತಿರುವುದರಿಂದ ಇದನ್ನು Geoinformaticsನಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಅಧಿಸೂಚನೆಯಲ್ಲಿ 'ಅನ್ವಯಿಕ ಭೂವಿಜ್ಞಾನ'ದ ಬದಲು Geoinformatics ಎಂದು ಬದಲಾಯಿಸುವಂತೆ ವಿಭಾಗಾಧ್ಯಕ್ಷರು ಕೋರಿರುತ್ತಾರೆ. ಆದರೆ, ಸದರಿ ವಿಷಯಕ್ಕೆ ಕುಲಾಧಿಪತಿಯವರಿಂದ ಅನುಮೋದಿತ ಪರಿನಿಯಮ ಇಲ್ಲದಿದ್ದರೂ ವಿಶ್ವವಿದ್ಯಾಲಯವು ಅನ್ವಯಿಕ ಭೂವಿಜ್ಞಾನದ Geoinformatics ವಿಷಯವನ್ನು ಸೇರಿಸಿಕೊಂಡು ಅಧ್ಯಯನ ಮಂಡಳಿ ಹಾಗೂ ಡಾಕ್ಟರಲ್ ಕಮಿಟಿ ರಚಿಸಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಪ್ರಸ್ತುತ ಪಿಹೆಚ್.ಡಿ.ಯ Geoinformatics ವಿಷಯವನ್ನು 'Geoinformatics (Applied Geology)' ಎಂದು ಬದಲಾಯಿಸಬಹುದಾಗಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ಪ್ರಸ್ತುತ ಪಿಹೆಚ್.ಡಿ.ಯ Geoinformatics ವಿಷಯವನ್ನು Geoinformatics (Applied Geology) ಎಂದು ಬದಲಾಯಿಸಲು ಸಭೆಯು ಅನುಮೋದಿಸಿತು.

**2023:ಎಸಿ–2.19: ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು ಹಾಗೂ ಇತರೆ ವಿಷಯಗಳು:**

**2023:ಎಸಿ–2.19(1.1):** **ಡಾ. ಪರಮೇಶ ಮಸಲವಾಡ:** ಮಾತನಾಡುತ್ತಾ, ಬಿ.ಇಡಿ., ಕಾಲೇಜಿನ ಪ್ರಾಂಶುಪಾಲರಿಗೆ ನೀಡಲಾಗಿದ್ದ, ಸಿಂಡಿಕೇಟ್ ಸದಸ್ಯತ್ವವನ್ನು ಹಿಂಪಡೆಯಲಾಗಿದೆ. ಆದರೆ, ದಾವಣಗೆರೆ, ಧಾರವಾಡ ಮತ್ತು ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರುಗಳಿಗೆ ಸಿಂಡಿಕೇಟ್ ಸದಸ್ಯತ್ವ ನೀಡಲಾಗುತ್ತಿದ್ದು, ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಬಿ.ಇಡಿ. ಕಾಲೇಜಿನ ಕನಿಷ್ಠ ಇಬ್ಬರು ಪ್ರಾಂಶುಪಾಲರಿಗೆ ಮೀಸಲಿಡುವುದಕ್ಕೆ ನಿಯಮಗಳಲ್ಲಿ ಮಾರ್ಪಾಡು ಮಾಡಬೇಕೆಂದರು. ಪ್ರೊ.ಜಗನ್ನಾಥ ಕೆ. ಡಾಂಗೆರವರು ಮಾತನಾಡಿ ಈ ಹಿಂದೆ ನೀಡಲಾಗುತ್ತಿತ್ತು, ಈಗ ನಿಂತಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆಯಲ್ಲಿಯೇ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರು ಬಂದಿದ್ದರಿಂದ ಅವರನ್ನು ಪರಿಗಣಿಸಿರಬಹುದು ಎಂದರು.

ಕುಲಸಚಿವರು ಮಾತನಾಡುತ್ತಾ, ಸಿಂಡಿಕೇಟ್‌ನ್ನು ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರವೇ ರಚಿಸಲಾಗುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 28(1)(ಎಫ್)ರಲ್ಲಿ ಸಿಂಡಿಕೇಟ್‌ಗೆ ಪ್ರಾಂಶುಪಾಲರ ನಾಮನಿರ್ದೇಶನದ ಕುರಿತಾಗಿ "ಜೇಷ್ಠತೆಯನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರು, ಅವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗಿರತಕ್ಕದ್ದು" ಎಂದಿರುತ್ತದೆ. ಆದರೆ, ಇದರಲ್ಲಿ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಿಗೆ ಯಾವುದೇ ಮೀಸಲಾತಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಸರದಿ ಹಾಗೂ ಜೇಷ್ಠತೆಯ ಅನುಸಾರ ಬಿ.ಇಡಿ., ಕಾಲೇಜುಗಳ ಪ್ರಾಂಶುಪಾಲರಿಗೆ ಸಿಂಡಿಕೇಟ್ ಸದಸ್ಯತ್ವ ದೊರೆಯುತ್ತದೆ ಎಂದರು.

2023:ಎಸಿ–2.19(1.2): **ಡಾ. ಪರಮೇಶ ಮಸಲವಾಡ:** ವಿಶ್ವವಿದ್ಯಾಲಯದಿಂದ ಅನುಮೋದನೆಗೊಂಡಿರುವ ಉಪನ್ಯಾಸಕರುಗಳಿಗೆ ಮಾತ್ರ ವಿಶ್ವವಿದ್ಯಾಲಯದ ಶೈಕ್ಷಣಿಕ/ಪರೀಕ್ಷಾ ಕಾರ್ಯಗಳಿಗೆ ಬಳಸಿಕೊಳ್ಳುವ ಬಗ್ಗೆ.

ಕುಲಸಚಿವ(ಮೌಲ್ಯಮಾಪನ)ರವರು ಮಾಹಿತಿ ನೀಡಿ ಮಾತನಾಡುತ್ತಾ, ಅಧ್ಯಯನ ಮಂಡಳಿಗಳಲ್ಲಿ ಅನುಮೋದಿತವಾಗಿರುವ ಅಧ್ಯಾಪಕರ ಪಟ್ಟಿಯಿಂದ ಸರದಿ ಮತ್ತು ಜೇಷ್ಠತೆ ಆಧಾರದಲ್ಲಿ ಪರೀಕ್ಷಾ ಮಂಡಳಿಗೆ (ಬಿ.ಓ.ಇ.) ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲಾಗುತ್ತದೆ. ಇನ್ನುಳಿದಂತೆ ಪ್ರಾಂಶುಪಾಲರು ಶಿಫಾರಸ್ಸು ಮಾಡುವ ಅಧ್ಯಾಪಕರನ್ನು ಕೊಠಡಿ ಮೇಲ್ವಿಚಾರಣೆ, ಮೌಲ್ಯಮಾಪನ ಮುಂತಾದ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತದೆ ಎಂದರು

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

ನಿರ್ಣಯ: **ಯಾವುದೂ ಇಲ್ಲ**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

2023:ಎಸಿ–2.19(1.3): **ಡಾ.ಮಮತಾ ಸಾಲಿ:** ಸ್ನಾತಕ ಪದವಿಯ ಕೆಲವು ವಿದ್ಯಾರ್ಥಿಗಳ ಮೊದಲ ವರ್ಷದ ಫಲಿತಾಂಶವೇ ಈವರೆಗೂ ಪ್ರಕಟವಾಗಿಲ್ಲ. ಸದರಿ ವಿದ್ಯಾರ್ಥಿಗಳು ಈಗ ಮೂರನೇ ವರ್ಷದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಫಲಿತಾಂಶವಿಲ್ಲದೇ ಅವರಿಗೆ ಹಲವು ರೀತಿಯ ತೊಂದರೆಗಳಾಗುತ್ತಿವೆ ಎಂದರು.

ಕುಲಸಚಿವ (ಮೌಲ್ಯಮಾಪನ)ವರು ಮಾತನಾಡಿ Conversion ಸಮಸ್ಯೆ ಇತ್ತು. ಈಗ ಅದನ್ನು ಸರಿಪಡಿಸಲಾಗಿದ್ದು, ಸಧ್ಯದಲ್ಲಿಯೇ ಫಲಿತಾಂಶ ನೀಡಲಾಗುವುದು ಎಂದರು. ಎನ್.ಇ.ಪಿ. ನೋಡಲ್ ಆಫೀಸರ್ ಪ್ರೊ.ಸೈಯದ್ ಅಶ್ಫಕ್ ಅಹ್ಮದ್‌ರವರು ಮಾತನಾಡಿ, ಕೆಲವು ಕಾಲೇಜುಗಳ ಸುಮಾರು 250 ವಿದ್ಯಾರ್ಥಿಗಳ ಫಲಿತಾಂಶ ಆಗಿಲ್ಲ. ಅವರುಗಳದ್ದು ಸಮಸ್ಯೆ ಇದೆ. ಹಾಜರಾತಿ ಮತ್ತು ಆಂತರಿಕ ಅಂಕಗಳನ್ನು ಆನ್‌ಲೈನ್/ಆಫ್‌ಲೈನ್ ಹೀಗೆ ವಿವಿಧ ರೀತಿಯಲ್ಲಿ ಕಳುಹಿಸಿದ್ದಾರೆ. ಕಾಲೇಜಿನವರು ಅಗತ್ಯ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಬಂದಾಗ ಸಮಸ್ಯೆ ಬಗೆಹರಿಸಿ ಫಲಿತಾಂಶ ನೀಡಲಾಗಿದೆ ಎಂದರು. ಕುಲಸಚಿವರು (ಮೌಲ್ಯಮಾಪನ)ರವರು ಮುಂದುವರೆದು ಮಾತನಾಡಿ, ಸ್ಟೂಡೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ವಿದ್ಯಾರ್ಥಿಗಳು. ಅವರು ಮಾಹಿತಿಗಳನ್ನು ಸರಿಯಾಗಿ ಅಪ್‌ಲೋಡ್ ಮಾಡದಿದ್ದಲ್ಲಿ ಸಮಸ್ಯೆ ಆಗುತ್ತದೆ ಎಂದರು.

2023:ಎಸಿ–2.19(1.4): **ಡಾ.ಸಣ್ಣಹನುಮಪ್ಪ, ಜಿ.** ರವರು ಮಾತನಾಡಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಈ ಹಿಂದೆ ಯಾವುದೇ ಸೆಮಿಸ್ಟರ್‌ನಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿತ್ತು. ಆದರೆ, ಈಗ ಎನ್.ಇ.ಪಿ. ನಲ್ಲಿ ರಿಪೀಟರ್ ವಿದ್ಯಾರ್ಥಿಗಳು ಸಮ/ಬೆಸ ಆಯಾ ಸೆಮಿಸ್ಟರ್‌ನಲ್ಲಿ ಮಾತ್ರವೇ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾಹಿತಿ ನೀಡಿ ಮಾತನಾಡುತ್ತಾ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಇನ್ನೊಂದು ಸಪ್ಲಿಮೆಂಟರಿ ಪರೀಕ್ಷೆ ನಡೆಸಲು ಯೋಚಿಸಲಾಗುತ್ತಿದ್ದು, ಶೀಘ್ರವೇ ಈ ಕುರಿತಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2023:ಎಸಿ–2.19(1.5): **ಶ್ರೀ ಮನೋಜ್ ಸಲ್ಡಾನ:** ಕೇರಳದ ಮಹಾತ್ಮಾಗಾಂಧಿ ವಿಶ್ವವಿದ್ಯಾಲಯ, ಕೊಚ್ಚಿನ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಎ.ಪಿ.ಜೆ. ಅಬ್ದುಲ್ ಕಲಾಂ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿದಂತೆ ಕೇರಳ ರಾಜ್ಯ ಸರ್ಕಾರವು ಕ್ಯಾಂಪಸ್‌ಗಳನ್ನು ಮಹಿಳಾ ಸ್ನೇಹಿಯಾಗಿಸಲು ವಿದ್ಯಾರ್ಥಿನಿಯರಿಗೆ ಮಾಸಿಕ ಋತುಚಕ್ರದ ರಜೆ ಹಾಗೂ 60 ದಿನಗಳ ಹೆರಿಗೆ ರಜೆ ನೀಡುತ್ತಿದ್ದಾರೆ. ಅಲ್ಲದೆ ವಿದ್ಯಾರ್ಥಿನಿಯರಿಗೆ ಹಾಜರಾತಿಯಲ್ಲಿ ಶೇ.2ರಷ್ಟು ವಿನಾಯಿತಿ ಇದೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಅಧಿಕವಾಗಿರುವುದರಿಂದ ಈ ಸೌಲಭ್ಯಗಳನ್ನು

ಅಳವಡಿಸಿಕೊಳ್ಳುವುದರ ಮೂಲಕ ವಿದ್ಯಾರ್ಥಿನಿಯರಿಗೆ ಅನುಕೂಲ ಮಾಡಿಕೊಡುವುದರ ಜೊತೆಗೆ ಇದನ್ನು ಜಾರಿಗೆ ತಂದ ರಾಜ್ಯದ ಮೊದಲ ವಿಶ್ವವಿದ್ಯಾಲಯ ಎಂಬ ಹೆಮ್ಮೆ ಕೂಡ ನಮ್ಮದಾಗುತ್ತದೆ ಎಂದರು. ಇದೊಂದು ಒಳ್ಳೆಯ ಬೆಳವಣಿಗೆ ಎಂದು ಪ್ರಶಂಸಿಸಿದ ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಚರ್ಚೆಯ ನಂತರ, ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿನಿಯರಿಗೆ ಋತುಚಕ್ರದ ರಜೆ ಮತ್ತು 18 ವರ್ಷ ಮೇಲ್ಪಟ್ಟ ವಿವಾಹಿತ ವಿದ್ಯಾರ್ಥಿನಿಯರಿಗೆ 60 ದಿನಗಳ ಹೆರಿಗೆ ರಜೆ ನೀಡಲು ಹಾಗೂ ಹಾಜರಾತಿಯಲ್ಲಿ ಶೇ.2ರಷ್ಟು ವಿನಾಯಿತಿ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2023:ಎಸಿ–2.19(1.6):** **ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ:** ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ., ಸಂಶೋಧನೆ ಕೈಗೊಂಡಿರುವ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಆದರೆ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಇತ್ತೀಚಿನ ದಿನಗಳಲ್ಲಿ ಲ್ಯಾಪ್‌ಟಾಪ್ ನೀಡುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳ ಸಂಶೋಧನೆಗೆ ತೊಂದರೆಯಾಗುತ್ತಿದೆ ಎಂದರು. ಕುಲಸಚಿವರು ಮಾಹಿತಿ ನೀಡಿ, ಅವರಿಗೆ ವಿಶ್ವವಿದ್ಯಾಲಯದಿಂದಲೇ ಪ್ರತಿ ತಿಂಗಳು ಫೆಲೋಶಿಪ್ ನೀಡಲಾಗುತ್ತಿದೆ. ಆದರೆ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಲ್ಯಾಪ್‌ಟಾಪ್ ನೀಡಲು ಸಾಕಷ್ಟು ಅನುದಾನ ಲಭ್ಯತೆ ಇಲ್ಲ. ಇದಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುದಾನ ಬಂದ ಕೂಡಲೇ ಅರ್ಹ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುವುದು ಎಂದರು. ಮುಂದುವರೆದು ಮಾತನಾಡಿದ ಮಾನ್ಯ ಶಾಸಕರು ವಿಶ್ವವಿದ್ಯಾಲಯದ ಅಧಿಕಾರಿಗಳು ಬೆಂಗಳೂರಿಗೆ ಬಂದಾಗ ನನ್ನನ್ನು ಭೇಟಿಯಾದರೆ, ನಾನು ಸಂಬಂಧಪಟ್ಟ ಇಲಾಖಾ ಸಚಿವರಲ್ಲಿಗೆ ತಮ್ಮನ್ನು ಕರೆದೊಯ್ದು, ಚರ್ಚಿಸಿ ಮಂಜೂರು ಮಾಡಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

**2023:ಎಸಿ–2.19(1.7):** **ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ:** ಈ ಹಿಂದೆ ಚಿಕ್ಕಮಗಳೂರಿನಲ್ಲಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕೇಂದ್ರ ಇತ್ತು. ಈಗ ಏಕೆ ನಿಲ್ಲಿಸಲಾಗಿದೆ ಎಂದರು.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಈ ಹಿಂದೆ ಐ.ಡಿ.ಎಸ್.ಜಿ. ಕಾಲೇಜಿನಲ್ಲಿ ಮೌಲ್ಯಮಾಪನ ಕೇಂದ್ರ ತೆರೆಯಲಾಗಿತ್ತು. ಆದರೆ, ಚಿಕ್ಕಮಗಳೂರು, ಕಡೂರು ಮೂಡಿಗೆರೆ ಹೊರತುಪಡಿಸಿ ಇತರೆ ತಾಲ್ಲೂಕುಗಳ ಅಧ್ಯಾಪಕರಿಗೆ ಚಿಕ್ಕಮಗಳೂರು ದೂರವಾಗುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೌಲ್ಯಮಾಪನಕ್ಕೆ ಬರಲಿಲ್ಲ. ಮೌಲ್ಯಮಾಪನ ವಿಳಂಬದಿಂದ ಫಲಿತಾಂಶ ಪ್ರಕಟಣೆ ವಿಳಂಬವಾಗುತ್ತಿತ್ತು. ಈ ಕಾರಣದಿಂದಾಗಿ ಮೌಲ್ಯಮಾಪನ ಕೇಂದ್ರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಚಿಕ್ಕಮಗಳೂರು ಹಾಗೂ ಸಾಗರದಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದರು.

**2023:ಎಸಿ–2.19(1.8):** **ಶ್ರೀಮತಿ ಗೀತಾಂಜಲಿ:** ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪಿಹೆಚ್.ಡಿ., ಮಾರ್ಗದರ್ಶಕರು ಕಡಿಮೆ ಇದ್ದು, ಇದರಿಂದ ಇತಿಹಾಸದಲ್ಲಿ ಸಂಶೋಧನೆ ಕೈಗೊಳ್ಳಲು ಇಚ್ಚಿಸುವವರಿಗೆ ಅವಕಾಶ ಬಹಳ ಕಡಿಮೆ ಇದೆ. ಆದುದರಿಂದ, ಸಹ್ಯಾದ್ರಿ ಕಲಾ ಕಾಲೇಜಿನ ಅಧ್ಯಾಪಕರನ್ನು ಮಾರ್ಗದರ್ಶಕರೆಂದು ಮಾನ್ಯತೆ ನೀಡುವುದರ ಮೂಲಕ ಹೆಚ್ಚಿನವರು ಇತಿಹಾಸ ಸಂಶೋಧನೆ ಕೈಗೊಳ್ಳಲು ಅವಕಾಶ ಮಾಡಿಕೊಡಬೇಕೆಂದರು.

ಪ್ರೊ.ಜಿ.ಸರ್ವಮಂಗಳರವರು ಮಾಹಿತಿ ನೀಡಿ ಮಾತನಾಡುತ್ತಾ, ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಪಿ.ಹೆಚ್‌ಡಿ. ಪಡೆದಿರುವ ಇಬ್ಬರು ಖಾಯಂ ಅಧ್ಯಾಪಕರಿದ್ದಾರೆ. ಅವರಲ್ಲಿ ಒಬ್ಬರಿಗೆ ಈಗಾಗಲೇ ಮಾರ್ಗದರ್ಶಕರೆಂದು ವಿಶ್ವವಿದ್ಯಾಲಯವು ಮಾನ್ಯತೆ ನೀಡಿದೆ. ಪಿಹೆಚ್.ಡಿ. ಪ್ರವೇಶ

ಪ್ರಕ್ರಿಯೆಗಳು ಮುಗಿದು ಈಗ ಕೋರ್ಸ್‌ವರ್ಕ್ ನಡೆಯುತ್ತಿದೆ. ಆದುದರಿಂದ, ಅವರಿಗೆ ಮುಂದಿನ ಬಾರಿ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುವುದು. ಸದರಿ ಕಾಲೇಜಿನ ಇನ್ನೊಬ್ಬ ಅಧ್ಯಾಪಕರು ಮಾರ್ಗದರ್ಶಕ ಮಾನ್ಯತೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ವಿಶ್ವವಿದ್ಯಾಲಯದ ಪರಿನಿಯಮದ ಪ್ರಕಾರ ಅವರು ಮಾರ್ಗದರ್ಶಕರಾಗಲು ಅರ್ಹರಿಲ್ಲವೆಂಬ ಕಾರಣದಿಂದ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯು ಅವರ ಮನವಿಯನ್ನು ತಿರಸ್ಕರಿಸಿದೆ ಎಂದರು. ಮುಂದುವರೆದು ಮಾತನಾಡಿದ ಅವರು ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಬಹಳಷ್ಟು ಅಧ್ಯಾಪಕರು ನಿವೃತ್ತರಾಗಿದ್ದಾರೆ. ಬಹಳಷ್ಟು ವರ್ಷಗಳಿಂದ ಹೊಸಬರ ನೇಮಕಾತಿ ಆಗಿಲ್ಲ. ಮುಂದಿನ ದಿನಗಳಲ್ಲಿ ಹೊಸ ನೇಮಕಾತಿಗಳಾದಲ್ಲಿ ಇತಿಹಾಸ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದರು.

ಸದಸ್ಯರಾದ ಡಾ. ಶೇಖರ್‌ರವರು ಮಾತನಾಡಿ ಸರ್ಕಾರಿ ಕಾಲೇಜುಗಳ ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ., ಗೈಡ್‌ಶಿಪ್ ನೀಡುವಂತೆ ಕೋರಿದರು. ಮಾನ್ಯ ಕುಲಪತಿಯವರು ಮಾತನಾಡಿ, ಘನತೆವೆತ್ತ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ ವಿಶ್ವವಿದ್ಯಾಲಯದ ಪಿ.ಹೆಚ್.ಡಿ., ಪರಿನಿಯಮದ ಪ್ರಕಾರ ಗೈಡ್‌ಶಿಪ್ ನೀಡಲು ಸಂಬಂಧಪಟ್ಟ ಕಾಲೇಜನ್ನು ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡಬೇಕು. ಅಲ್ಲದೇ, ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರನ್ನು 3–4 ವರ್ಷಗಳಿಗೆ ವರ್ಗಾವಣೆ ಮಾಡುವುದರಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ತಿಳಿಸುತ್ತಾ, ಈ ಕುರಿತಾಗಿ ದಿನಾಂಕ:18–03–2023ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಷಯ ಸಂಖ್ಯೆ:2023:ಎಸಿ–11.08(2)ರಲ್ಲಿ ಈಗಾಗಲೇ ಸವಿವರವಾಗಿ ಚರ್ಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

**2023:ಎಸಿ–2.19(1.9):** **ಪ್ರಾಂಶುಪಾಲರಾದ ಡಾ.ಸಣ್ಣಹನುಮಪ್ಪ, ಜಿ.** ರವರು ಮಾತನಾಡಿ ಅತಿಥಿ ಉಪನ್ಯಾಸಕರು ಪ್ರತಿ ಸೆಮಿಸ್ಟರ್‌ನಲ್ಲಿ ಕೇವಲ 5 ದಿನ ಮಾತ್ರ ಮೌಲ್ಯಮಾಪನದಲ್ಲಿ ಪಾಲ್ಗೊಳ್ಳಲು ಅವಕಾಶ ಇದೆ. ಕೆಲವು ವಿಷಯಗಳ ಮೌಲ್ಯಮಾಪನ ಕಾರ್ಯವು ಬಹಳ ದಿನಗಳವರೆಗೆ ನಡೆಯುವುದುದರಿಂದ ಹೆಚ್ಚಿನ ದಿನಗಳಿಗೆ ಅವಕಾಶ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು ಎಂದರು. ಬಹಳಷ್ಟು ಪ್ರಾಂಶುಪಾಲರು ಇದಕ್ಕೆ ಧ್ವನಿಗೂಡಿಸಿದರು.

ಕುಲಸಚಿವ(ಮೌಲ್ಯಮಾಪನ)ರವರು ಮಾಹಿತಿ ನೀಡಿ ಮಾತನಾಡುತ್ತಾ, 2024–25ನೇ ಶೈಕ್ಷಣಿಕ ಕ್ಯಾಲೆಂಡರ್ ಕುರಿತಾಗಿ ಈಗಾಗಲೇ ಒಂದು ಸಭೆ ಆಗಿದೆ. ಸಭೆಯಲ್ಲಿ ಚರ್ಚಿಸಿರುವಂತೆ ಎರಡು ಸೆಮಿಸ ರ್‌ಗಳ ಮಧ್ಯದಲ್ಲಿ 45 ದಿನಗಳನ್ನು ಪರೀಕ್ಷೆ ಹಾಗೂ ಮೌಲ್ಯಮಾಪನಕ್ಕಾಗಿ ನಿಗದಿಪಡಿಸಲು ಚರ್ಚಿಸಲಾಗಿದೆ. ಇದು ಜಾರಿಯಾದಲ್ಲಿ ಹೆಚ್ಚಿನ ರಜಾ ಅವಧಿ ಸಿಗುವುದರಿಂದ ಅತಿಥಿ ಉಪನ್ಯಾಸಕರಿಗೆ ಮೌಲ್ಯಮಾಪನದಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ ಎಂದರು. ಪ್ರಾಂಶುಪಾಲರಾದ ಡಾ.ಶೇಖರ್‌ರವರು, ಪ್ರಸ್ತುತ ಅತಿಥಿ ಉಪನ್ಯಾಸಕರಿಗೆ ಸಮಸ್ಯೆಯಾಗುತ್ತಿತ್ತು. ಈ ವ್ಯವಸ್ಥೆ ಬಂದರೆ ಅನುಕೂಲವಾಗುತ್ತದೆ ಎಂದರು.

**2023:ಎಸಿ–2.19(1.10):** **ಪ್ರಾಂಶುಪಾಲರಾದ ಶ್ರೀ ಅನಂತ, ಎಸ್.,** ರವರು ಮಾತನಾಡಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಬೇರೆ ವಿಶ್ವವಿದ್ಯಾಲಯಗಳಿಗಿಂತ ಸುಮಾರು ಒಂದೂವರೆ ತಿಂಗಳುಗಳಷ್ಟು ಹಿಂದಿದ್ದೇವೆ. ಇದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದ್ದು, ಬೇರೆ ವಿಶ್ವವಿದ್ಯಾಲಯಗಳಿಗೆ ಸರಿಹೊಂದುವಂತೆ ಮಾರ್ಪಡಿಸಿರಿ ಎಂದರು.

ಕುಲಸಚಿವರು ಮಾಹಿತಿ ನೀಡುತ್ತಾ 2024–25ನೇ ಶೈಕ್ಷಣಿಕ ವೇಳಾಪಟ್ಟಿ ಕುರಿತಂತೆ ಈಗಾಗಲೇ ಸಭೆ ನಡೆದಿದ್ದು, ಏಕರೂಪದ ವೇಳಾಪಟ್ಟಿ ಆಗುತ್ತದೆ ಎಂದರು.

**2023:ಎಸಿ–2.19(1.11):** **ಪ್ರಾಂಶುಪಾಲರಾದ ಡಾ.ಸಣ್ಣಹನುಮಪ್ಪ, ಜಿ.,** ರವರು ಮಾತನಾಡಿ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಸಿಂಡಿಕೇಟ್ ಸೇರಿದಂತೆ ವಿಶ್ವವಿದ್ಯಾಲಯದ ವಿವಿಧ

ಸಮಿತಿಗಳಿಗೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಅಧ್ಯಾಪಕರನ್ನು ನಾಮನಿರ್ದೇಶನ ಮಾಡುವಾಗ ಜೇಷ್ಠತೆಯನ್ನು ಪರಿಗಣಿಸಬೇಕು. ಕೆಲವು ಸಂದರ್ಭಗಳಲ್ಲಿ ಸೇವಾ ಹಿರಿತನವಿದ್ದವರು ಲಭ್ಯವಿದ್ದಾಗ್ಯೂ ಕಿರಿಯರು ಸದಸ್ಯರಾಗುತ್ತಿದ್ದು, ಹಿರಿಯ ಅಧ್ಯಾಪಕರು/ಪ್ರಾಂಶುಪಾಲರು ಮುಜುಗರ ಅನುಭವಿಸುವಂತಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ಸಿದ್ಧಪಡಿಸಿರುವ ಜೇಷ್ಠತಾ ಪಟ್ಟಿಯ ಪ್ರಕಾರವೇ ನಾಮನಿರ್ದೇಶನ/ನೇಮಕ ಮಾಡಲಾಗುತ್ತಿದೆ. ಆದರೆ, ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರು ಹಾಗೂ ಪ್ರಾಂಶುಪಾಲರು ಪ್ರತಿವರ್ಷ ವರ್ಗಾವಣೆ ಹೊಂದುತ್ತಿರುತ್ತಾರೆ. ಈ ಮಾಹಿತಿಯನ್ನು ಕಾಲೇಜಿನವರು ವಿಶ್ವವಿದ್ಯಾಲಯಕ್ಕೆ ಅಯಾ ಸಮಯದಲ್ಲಿ ಒದಗಿಸದಿರುವುದರಿಂದ ಈ ರೀತಿ ಆಗುತ್ತಿದೆ ಎಂದರು. ಪ್ರೊ.ಜಿ.ಪ್ರಶಾಂತನಾಯಕರವರು ಮಾತನಾಡಿ, ಕಾಲೇಜುಗಳಲ್ಲಿ ವರ್ಗಾವಣೆಯಾಗಿ ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ತೆರಳುವ ಹಾಗೂ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಿಗೆ ಬರುವ ಅಧ್ಯಾಪಕರು/ಪ್ರಾಂಶುಪಾಲರುಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ತಕ್ಷಣವೇ ಒದಗಿಸಿದಲ್ಲಿ ಈ ರೀತಿಯ ಗೊಂದಲಗಳಾಗುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ ಇನ್ನು ಮುಂದೆ ವರ್ಗಾವಣೆಯಾಗುವವರ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾಂಗ, ಕಾಲೇಜು ಅಭಿವೃದ್ಧಿ ಪರಿಷತ್ತು ಹಾಗೂ ಪ್ರಾಧಿಕಾರ ವಿಭಾಗಕ್ಕೆ ನೀಡುವಂತೆ ತಿಳಿಸಿದರು.

**2023:ಎಸಿ–2.19(1.12):** **ಶ್ರೀಮತಿ ಗೀತಾಂಜಲಿ**ರವರು ಮಾತನಾಡಿ ಕಾಲೇಜುಗಳ ಶೈಕ್ಷಣಿಕ ಚಟುವಟಿಕೆಗಳು ಆರಂಭವಾಗಿ ಈಗಾಗಲೇ 2 ತಿಂಗಳುಗಳಾಗಿವೆ. ಬಹಳಷ್ಟು ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಈಗಾಗಲೇ ಆಂತರಿಕ ಕಿರುಪರೀಕ್ಷೆಗಳಾಗಿವೆ. ಆದರೆ, ಸಹ್ಯಾದ್ರಿ ಕಾಲೇಜುಗಳಲ್ಲಿ ಇದುವರೆಗೂ ಅತಿಥಿ ಉಪನ್ಯಾಸಕರ ನೇಮಕ ಆಗಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು. ಕುಲಸಚಿವರು ಮಾಹಿತಿ ನೀಡುತ್ತಾ 2024–25ನೇ ಶೈಕ್ಷಣಿಕ ವೇಳಾಪಟ್ಟಿ ಕುರಿತಂತೆ ಈಗಾಗಲೇ ಸಭೆ ನಡೆದಿದ್ದು, ಏಕರೂಪದ ವೇಳಾಪಟ್ಟಿ ಆಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರ ನೇಮಕಾತಿಗೆ ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ಅನುಮತಿ ಬಂದಕೂಡಲೇ ಆದೇಶ ನೀಡುವುದಾಗಿ ತಿಳಿಸಿದರು. ಶ್ರೀಮತಿ ಗೀತಾಂಜಲಿಯವರು ಮಾತನಾಡಿ, ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದವರಿಗೆ ಆದ್ಯತೆ ನೀಡಬೇಕು. ಅವಧಿ ಕಡಿತಗೊಳಿಸಬಾರದು ಎಂದರು. ಕುಲಸಚಿವರು ಮಾಹಿತಿ ನೀಡುತ್ತಾ ಘಟಕ ಹಾಗೂ ಸರ್ಕಾರ ಆಡಳಿತಕ್ಕೊಳಪಟ್ಟ ಕಾಲೇಜುಗಳಿಗೆ ಒಟ್ಟು 127 ಅಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 88 ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 39 ಹುದ್ದೆಗಳು ಖಾಲಿ ಇದೆ. ಕಾಲೇಜಿನಿಂದ 197 ಅತಿಥಿ ಉಪನ್ಯಾಸಕರನ್ನು ಒಗಿಸುವಂತೆ ಬೇಡಿಕೆ ಸಲ್ಲಿಸಿದ್ದಾರೆ. ಆದರೆ, ಕಾರ್ಯಭಾರ ಇತ್ಯಾದಿಗಳನ್ನು ಪರಿಗಣಿಸಿ ಮಂಜೂರಾದವುಗಳಲ್ಲಿ ಖಾಲಿ ಇರುವ ಹುದ್ದೆಗಳಿಗಿಂತ ಹೆಚ್ಚಿನ 120 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಆದರೆ, ಮಂಜೂರಾತಿಗಿಂತ ಹೆಚ್ಚುವರಿ ನೇಮಕಕ್ಕೆ ಸರ್ಕಾರದ ಅನುಮೋದನೆ ಅಗತ್ಯ ಎಂದರು.

Digitally Signed by Snehal
Sudhakar Lokhande
Date: 16-12-2023 18:46:05
Reason: Approved

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

**ಕುಲಸಚಿವರು** **ಕುಲಪತಿಗಳು**